





ಕೆರೆ ಅಂಗಳದ ಹೂಳು ಎತ್ತುತ್ತಿರುವುದು



ರಾಜಕಾಲುವೆಯಲ್ಲಿರುವ ನವಾಬರ ಕಾಲದ ಗೇಟ್

ಯೋಜನಾಧಿಕಾರಿ ಉಲ್ಲಾಸ ಮೇಸ್ತ ಮುಂದಾಳತ್ವದಲ್ಲಿ ಏಪ್ರಿಲ್‌ನಲ್ಲೇ ಮಾಡಿ ಮುಗಿಸಲಾಗಿದೆ. ಹೂಳು ತೆಗೆದುಕೊಂಡು ಹೋಗುವ ಮೂಲಕ ರೈತರೂ ಪರೋಕ್ಷವಾಗಿ ಸಾಥ್ ನೀಡಿದ್ದಾರೆ. ಎಂಟು ಎಕರೆ ವಿಸ್ತೀರ್ಣದಲ್ಲಿ 3 ಅಡಿ ಆಳವಾಗಿ ಹೂಳೆತ್ತಲಾಗಿದ್ದು, ಇದೀಗ ಕೆರೆ ಸುಮಾರು 40 ಅಡಿ ಆಳವಿದೆ.

### ತೆಪ್ಪದ ತೇರು

ಕೆರೆ ಅಂಗಳ ತುಂಬಿದಾಗ ತೆಪ್ಪದ ತೇರನ್ನು ಎಳೆಯುವ ಸಂಪ್ರದಾಯ ಇಲ್ಲಿದೆ. ನೋಡಲು ಸಾವಿರಾರು ಜನ ಸೇರುತ್ತಾರೆ. ಅಗಸಿಹೊಂಡದಲ್ಲಿ ಸುಮಾರು ಹನ್ನೆರಡು ಆಳ ನೀರಿದ್ದು ಕೆರೆ ಅಂಗಳ ತುಂಬಿದರೆ ಅಗಸಿಹೊಂಡದಲ್ಲಿ 60 ಅಡಿ ನೀರು ತುಂಬುತ್ತದೆ. ಕಳೆದ ಹತ್ತು ವರ್ಷಗಳಿಂದ ಅಗಸಿಹೊಂಡ ತುಂಬಿಲ್ಲ. ಒಂದು ವರ್ಷ ಈ ಕೆರೆ ತುಂಬಿದರೆ ಮುಂದಿನ ಹತ್ತು ವರ್ಷದವರೆಗೆ ಕುಡಿಯುವ ನೀರಿಗೆ ಈ ಊರಿನ ಜನತೆಗೆ ಕಷ್ಟವಾಗುವುದಿಲ್ಲ ಎಂಬುದು ಹಿರಿಯರೊಬ್ಬರ ಮಾತು. ಪ್ರತಿವರ್ಷ ಬೇಸಿಗೆಗಾಲದಲ್ಲಿ ಇಲ್ಲಿನ ನಾಲ್ಕು ಕಿ.ಲೋ. ಮೀಟರ್ ವ್ಯಾಪ್ತಿಯ ಇಪ್ಪತ್ತು ಸಾವಿರಕ್ಕೂ ಅಧಿಕ ಮಂದಿಗೆ ಈ ಕೆರೆ ಕುಡಿಯುವ ನೀರನ್ನು ಒದಗಿಸುತ್ತದೆ.